ಕರಡು ಪ್ರತಿ

# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241
ಇಮೈಲ್: gchopra@worldbank.org
ವಾಷಿಂಗ್ಟನ್‌ನಲ್ಲಿ: ಕರೀನಾ ಮಾನಸೇ (202) 473-1729
ಇ-ಮೈಲ್: kmanasseh@worldbank.org

## ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ರಾಷ್ಟ್ರೀಯ ಹೆದ್ದಾರಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ವಿಶ್ವಬ್ಯಾಂಕಿನ ಬೆಂಬಲ

ಭಾರತದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಯನ್ನು ಪೂರ್ತಿಗೊಳಿಸಲು ಈ ಬೆಂಬಲ ಸಹಾಯಕವಾಗುತ್ತದೆ.

ವಾಷಿಂಗ್ಟನ್, ಡಿ.ಸಿ. ಡಿಸೆಂಬರ್ 21, 2004 – ಪೂರ್ವಪಶ್ಚಿಮ ರಾಷ್ಟ್ರೀಯ ಹೆದ್ದಾರಿಯಲ್ಲಿ ಉತ್ತರ ಪ್ರದೇಶದ ಲಕ್ನೋ ಮತ್ತು ಬಿಹಾರದ ಮುಜಫರ್‌ಪುರ್ ನಡುವಣ ರಾಷ್ಟ್ರೀಯ ಹೆದ್ದಾರಿ 28ಅನ್ನು ಬಲಪಡಿಸಿ ನವೀಕರಿಸಲು ವಿಶ್ವಬ್ಯಾಂಕ್ ಇಂದು 620 ಮಿಲಿಯ ಡಾಲರುಗಳ ಸಾಲ ಮಂಜೂರು ಮಾಡಿದೆ. ಈ ಯೋಜನೆಯು, ಭಾರತ ಸರಕಾರದ ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ನೀಡಲಾದ ನಾಲ್ಕನೇ ಸಾಲವಾಗಿದ್ದು, ಇದು ದೇಶದ ಆರ್ಥಿಕ ಚಟುವಟಿಕೆಗೆ ಮಾರಕವಾಗಿರುವ ಸಾಗಾಟ ವೆಚ್ಚವನ್ನು ಕಡಿತಗೊಳಿಸಲು ಹಾಗೂ ದೇಶದ ಈಶಾನ್ಯ ಭಾಗದ ಬಡತನದಲ್ಲಿರುವ ಮೂಲೆಗಳಿಗೆ ಸಂಪರ್ಕ ಸಿಗಲು ಅನುಕೂಲವಾಗುತ್ತದೆ.

ರಸ್ತೆ ಸಾಗಾಟ ಭಾರತದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಭೂ ಸಾಗಾಟದ 80 ಶೇಕಡ ರಸ್ತೆ ಸಾಗಾಟದ ಮೂಲಕವೇ ನಡೆಯುತ್ತದೆ. ರಾಷ್ಟ್ರೀಯ ಹೆದ್ದಾರಿ ಜಾಲದ ಒಟ್ಟು ಉದ್ದ ಸುಮಾರು 65,000 ಕಿ.ಮೀ. ಇದು ಒಟ್ಟು ರಸ್ತೆ ಜಾಲದ ಶೇಕಡ 2 ಕ್ಕಿಂತಲೂ ಕಡಿಮೆ ಆದರೂ, ರಸ್ತೆ ಸಾಗಾಟದ 40 ಶೇಕಡದಷ್ಟಾಗುತ್ತದೆ. ಕಳೆದ ಒಂದು ದಶಕದಲ್ಲಿ ಕ್ರಮೇಣವಾಗಿ ಆರ್ಥಿಕ ಬೆಳವಣಿಗೆ ಆದುದರ ಪರಿಣಾಮವಾಗಿ ರಾಷ್ಟ್ರೀಯ ಹೆದ್ದಾರಿಯ ವಾಹನಗಳ ಸಂದಣಿ ಸುಮಾರು ಶೇಕಡ 6ರಿಂದ ಶೇಕಡ 7.5ರಷ್ಟು ಅಧಿಕವಾಗಿದೆ.

"ಈ ಯೋಜನೆಯು ಸರಳವಾದ ಉದ್ದೇಶವನ್ನು ಹೊಂದಿದೆ : ಲಕ್ನೋ ಮತ್ತು ಮುಜಫರ್ ನಗರ ನಡುವೆ, ರಸ್ತೆ ಸುಧಾರಿತ ಪ್ರವಾಸ ಮಾಡುವುದು ಸಾಧ್ಯವಾಗಿದೆ," ಎನ್ನುತ್ತಾರೆ ವಿಶ್ವಬ್ಯಾಂಕಿನ ಹಿರಿಯ ಸಾಗಾಟ ವಿಶೇಷಜ್ಞ ಹಾಗೂ ಈ ಯೋಜನೆಯ ಕ್ರಿಯಾನ್ವಯ ಮುಖಂಡ, ಪೀರ್ಸ್ ವಿಕರ್ಸ್. "ಸಂಚಾರ ಸಮಯವನ್ನು ಕಡಿತಗೊಳಿಸುವದಲ್ಲದೆ, ಖರ್ಚನ್ನು ಕಡಿಮೆಗೊಳಿಸಿ, ರಸ್ತೆಯ ಸ್ಥಿತಿಗತಿ ಹೆಚ್ಚು ಸುರಕ್ಷಿತವಾಗುವಂತೆ ಮಾಡುತ್ತದೆ. ತತ್‌ಪರಿಣಾಮವಾಗಿ, ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಂತ್ಯದಲ್ಲಿ ಒಟ್ಟಾರೆ ಗ್ರಾಹಕ ಸಂತೃಪ್ತಿ ಹೆಚ್ಚಾಗಲಿದೆ."

ಲಕ್ನೋ–ಮುಜಫರ್‌ಪುರ ರಾಷ್ಟ್ರೀಯ ಹೆದ್ದಾರೀ ಯೋಜನೆಯಲ್ಲಿ ಒಂದೇ ಒಂದು ಅಂಶವಿದೆ. ಹೆದ್ದಾರಿ ಅಪ್‌ಗ್ರೇಡಿಂಗ್. ಇದರ ಪ್ರಾಥಮಿಕ ಫಲಾನುಭವಿಗಳು ಅಂದರೆ ರಸ್ತೆಯ ಬಳಕೆದಾರರು. ಇದರಲ್ಲಿ ಶೇಕಡ 65ರಷ್ಟು ವಾಣಿಜ್ಯಿಕ ಅಭಿವೃದ್ಧಿಪಡಿಸಿದ ಹೆದ್ದಾರಿ ವ್ಯವಸ್ಥೆಯಿಂದ ಭಾರೀ ಜನಸಂಖ್ಯೆ ಇರುವ ಎರಡೂ ನಗರಗಳ ನಡುವೆ ಸಂಚಾರ ಹಾಗೂ ಸರಕು ಸಾಗಾಟ ಸಮಯ ಹಾಗೂ ಖರ್ಚು ಎರಡೂ ಸಹ ಕಡಿಮೆಯಾಗುತ್ತದೆ. ಎರಡನೆಯ ಉದ್ದೇಶಿತ ಜನಸಮೂಹ ಅಂದರೆ ಈ ರಸ್ತೆಗಳ ಇಕ್ಕೆಲಗಳಲ್ಲಿ ವಾಸ ಮಾಡುವ ಜನರು. ಹೆದ್ದಾರಿಗೆ ಸಮೀಪವೇ ವಾಸ ಮಾಡುವುದರಿಂದ, ಬಡತನದಲ್ಲಿರುವ ಸಾಧ್ಯತೆ ಶೇಕಡ 17ರಷ್ಟು ಕಡಿಮೆ ಹಾಗೂ ಕೆಲಸ ಪಡೆಯುವ ಸಾಧ್ಯತೆ ಶೇಕಡ 32ರಷ್ಟು ಅಧಿಕ ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ. ರಸ್ತೆಗಳ ಸಮೀಪ ಮನೆಗಳಿರುವುದರಿಂದ ಶಾಲೆಗಳಲ್ಲಿ ದಾಖಲಾತಿ ಕೂಡ ಶೇಕಡ 40ರಷ್ಟು ಹೆಚ್ಚಿದೆ.

ಈ ಯೋಜನೆಯು 1998ರಲ್ಲಿ ಪ್ರಾರಂಭಗೊಂಡ ಭಾರತ ಸರಕಾರದ ಒಟ್ಟಾರೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಯ (ಎನ್‌ಎಚ್‌ಡಿಪಿ), ಅಂಗವಾಗಿದೆ. ಸುಮಾರು 14,300 ಕಿಲೋ ಮೀಟರ್ ಉದ್ದದ ಪ್ರಮುಖ ರಾಷ್ಟ್ರೀಯ ಹೆದ್ದಾರಿ ಜಾಲವನ್ನು ಅಗಲಗೊಳಿಸಿ 4 ಲೇನುಗಳ ರಸ್ತೆಯಾಗಿ ಮಾಡಿ ಹಂತಹಂತವಾಗಿ 2008ರ ತನಕ ಬಲಪಡಿಸುವುದು ಎನ್‌ಎಚ್‌ಡಿಪಿಯ ಉದ್ದೇಶವಾಗಿದೆ. ಇದು ಸಾಕಾರಗೊಂಡಾಗ, ಸಮಗ್ರ ಭಾರತ, ಉತ್ತಮ ಗುಣಮಟ್ಟದ ನಾಲ್ಕು–

ಲೇನುಗಳ ಹೆದ್ದಾರಿಗಳಿಂದ ಜೋಡಿಸಲ್ಪಟ್ಟಿರುತ್ತದೆ. ಈ ಯೋಜನೆಯಿಂದಾಗಿ ತೊಂದರೆಗೆ ಒಳಗಾದ ಜನರಿಗೆ ಪರಿಹಾರ ನೀಡುವ, ಕಾಡುಗಳ ನಾಶ, ಯೋಜನೆಯ ಮೌಲ್ಯಮಾಪನ ಹಾಗೂ ನಿಗಾವಹಿಸುವಿಕೆ, ಅವಘಡ ತಡೆಯುವ ಕಾರ್ಯಕ್ರಮಗಳು ಹಾಗೂ ಎಚ್‌ಐವಿ/ಏಡ್ಸ್ ಮಾಹಿತಿಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಹಣಕಾಸು ಒದಗಿಸುತ್ತದೆ.

"ಪೂರ್ವ–ಪಶ್ಚಿಮ ವಲಯದ ಆವರಣಗಳು ಕೆಲವೊಂದು ಕಡು ಬಡ ಪ್ರದೇಶಗಳಲ್ಲಿ ಹಾದುಹೋಗುತ್ತದೆ" ಎನ್ನುತ್ತಾರೆ ವಿಶ್ವಬ್ಯಾಂಕಿನ ಭಾರತದ ಡೈರೆಕ್ಟರ್ ಮೈಕೆಲ್ ಕಾರ್ಟರ್. "ಅಭಿವೃದ್ಧಿ ಹೊಂದಿದ ಸಂಪರ್ಕದಿಂದಾಗಿ ಈ ಪ್ರದೇಶಗಳಿಗೆ ಪ್ರತ್ಯಕ್ಷ ಲಾಭವಾಗಲಿದೆ ಹಾಗೂ ಬೆಳವಣಿಗೆಯ ಹಾಗೂ ಒಟ್ಟಾರೆ ಪ್ರಗತಿಯ ಪರಿಣಾಮವಾಗಿ, ಪರೋಕ್ಷ ಲಾಭವಾಗಲಿದೆ. ರಸ್ತೆಯಿಂದಾಗಿ ಹೆಚ್ಚಿನ ಮೂಲೆ ಮೂಲೆಗಳು ಸಹ ಉತ್ತಮ ಸಂಪರ್ಕ ಹೊಂದುತ್ತವೆ. ಈ ವಲಯದಲ್ಲಿ, ಭಾರತ ಸರಕಾರ ಮತ್ತು ಬ್ಯಾಂಕ್ ಸುಯೋಜಿತ ಪಾಲುದಾರಿಕೆ ಹೊಂದಿದೆ ಹಾಗೂ ಎನ್‌ಎಚ್‌ಡಿಪಿ–ಗೆ ನೀಡಲಾಗುವ ಈ ನಾಲ್ಕನೆ ಸಾಲವು, ಭಾರತದ ಕಾರ್ಯಕ್ರಮಗಳಿಗೆ ವ್ಯವಸ್ಥಿತವಾಗಿ ಬೆಂಬಲ ನೀಡುವುದಕ್ಕೆ ಸಂಬಂಧಿಸಿದ ನಮ್ಮ ಕಟಿಬದ್ಧತೆಯನ್ನು ಸೂಚಿಸುತ್ತದೆ."

ಈ ಯೋಜನೆಯ, ಭಾರತಕ್ಕೆ ಸಂಬಂಧಿಸಿದ ವಿಶ್ವಬ್ಯಾಂಕಿನ ಕಾರ್ಯಯೋಜನೆಯ ಉದ್ದೇಶಗಳಿಗೆ ಪೂರಕವಾಗಿದೆ ಎಂದು ಆಶಿಸಲಾಗಿದೆ. ಬಡತನ ಕಡಿತಗೊಳಿಸುವಲ್ಲಿ ಹಾಗೂ ಖಾಸಗೀವಲಯದ ಪ್ರಗತಿಗೆ, ಕಿರಿದಾದ ಹೆದ್ದಾರಿಗಳು ತೊಡಕಾಗಿವೆ ಎಂಬುದನ್ನು ಗುರುತಿಸಲಾಗಿತ್ತು. ಈ ಯೋಜನೆಯನ್ನು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆರು ವರ್ಷಗಳಲ್ಲಿ ಅನುಷ್ಠಾನಕ್ಕೆ ತರಲಿದೆ. ಪುನಾರಚನೆ ಮತ್ತು ಅಭಿವೃದ್ಧಿಗಾಗಿರುವ ಅಂತರರಾಷ್ಟ್ರೀಯ ಬ್ಯಾಂಕ್ (ಐಬಿಆರ್‌ಡಿ) ನೀಡುವ ಈ ಸಾಲದ ಅವಧಿ 20 ವರ್ಷಗಳಾಗಿದ್ದು, ಇನ್ನೂ 5 ವರ್ಷಗಳ ಹೆಚ್ಚುವರಿ–ಗ್ರೇಸ್ ಪೀರಿಯಡ್ ಹೊಂದಿದೆ. ಭಾರತಕ್ಕೆ ಸರ್ವೇಸಾಮಾನ್ಯವಾಗಿ ನೀಡಲಾಗುವ ಹಣಕಾಸು ಷರತ್ತುಗಳನ್ನು ಹೊಂದಿದೆ.

ಭಾರತದಲ್ಲಿ ವಿಶ್ವಬ್ಯಾಂಕಿನ ಚಟುವಟಿಕೆಗಳ ಕುರಿತಾದ ಹೆಚ್ಚಿನ ಮಾಹಿತಿಗಾಗಿ ನೋಡಿ :
http://www.worldbank.org/in